110.18 ಲಕ್ಷ, ಷೇರು ರೂಪದಲ್ಲಿ 107.03 ಲಕ್ಷ ಹಾಗೂ ಸಹಾಯಧನ ರೂಪದಲ್ಲಿ `125.33 ಲಕ್ಷಗಳ ನೆರವು ನೀಡಲು ಉದ್ದೇಶಿಸಲಾಗಿದೆ.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಪಿಕಾರ್ಡ ಬ್ಯಾಂಕ್ ಹಾಗೂ ಟಿಎಪಿಎಮ್ಎಸ್ ಗಳಿಗೆ ಕಟ್ಟಡ ನಿರ್ಮಾಣ, ವಿಸ್ತರಣೆ ಹಾಗೂ ದುರಸ್ತಿಗಾಗಿ ಪೂರಕ ಅಂದಾಜಿನಲ್ಲಿ ಅನುದಾನ ಕಲ್ಪಿಸಲು ಉದ್ದೇಶಿಸಲಾಗಿದೆ.

ಇ) 2014–15ನೇ ಸಾಲಿಗೆ ಶೂನ್ಯ ಬಡ್ಡಿ ದರದಲ್ಲಿ `10,000.00 ಕೋಟಿ ಬೆಳೆ ಸಾಲ ನೀಡಲು ಸಹಕಾರಿ ಸಂಸ್ಥೆಗಳಿಗೆ ಗುರಿ ನಿಗದಿಪಡಿಸಲಾಗಿದ್ದು, ಈ ಪೈಕಿ ಮೇ ಅಂತ್ಯದವರೆಗೆ 4,04,823 ರೈತರಿಗೆ `2,253.06 ಕೋಟಿ ಸಲ ವಿತರಿಸಲಾಗಿದೆ.

ಸಹಕಾರ ಸಂಸ್ಥೆಗಳು ರಿಯಾಯಿತಿ ಬಡ್ಡಿ ದರದಲ್ಲಿ ರೈತರಿಗೆ ನೀಡುವ ಸಾಲದ ಮೇಲಿನ ಬಡ್ಡಿ ಹೊರೆಯನ್ನು ಸರಿದೂಗಿಸುವ ಉದ್ದೇಶಕ್ಕಾಗಿ 2014–15ನೇ ಸಾಲಿನಲ್ಲಿ ಸಹಕಾರ ಸಂಸ್ಥೆಗಳಿಗೆ `287.96 ಕೋಟಿಗಳ ಬಡ್ಡಿ ಸಹಾಯಧನವನ್ನು ನೀಡಲು ಆಯವ್ಯಯದಲ್ಲಿ ಅವಕಾಶ ಕಲ್ಪಿಸಿದ್ದು, ಜೂನ್ ಅಂತ್ಯಕ್ಕೆ `71.85 ಕೋಟಿಗಳನ್ನು ಮಂಜೂರು ನೀಡಿದ್ದು ಪೂರ್ತಿ ಮೊತ್ತವನ್ನು ಸಹಕಾರ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗಿದೆ.

ಬಾಕಿ ಇರುವ ಹಣ ಬಿಡುಗಡೆ

1866 (3108); ಶ್ರೀ ಭೂಸನೂರ ರಮೇಶ್ ಭಾಳಪ್ಪ (ಸಿಂಧಗಿ)

ಅ) ಬಿಜಾಪುರ ಜಿಲ್ಲೆಯಲ್ಲಿರುವ ಒಟ್ಟು ಸಕ್ಕರೆ ಕಾರ್ಖಾನೆಗಳು ಎಷ್ಟು (ತಾಲ್ಲೂಕುವಾರು ಸಂಖ್ಯೆ ಮತ್ತು ವಿಳಾಸ ಒದಗಿಸುವುದು)

ಆ) 2013–14ನೇ ಸಾಲಿನಲ್ಲಿ ಎಷ್ಟು ಪ್ರಮಾಣದ ಜನ್ ಕಬ್ಬನ್ನು ನುರಿಸಿವೆ ಮತ್ತು ಸಕ್ಕರೆ ಇಳುವರಿಯು ಶೇಕಡಾ ಪ್ರಮಾಣ ಎಷ್ಟು (ಕಾರ್ಖಾನೆಯವಾರು ಮಾಹಿತಿ ನೀಡುವುದು);

ಇ) ಕಬ್ಬು ಪೂರೈಸಿದ ರೈತರಿಗೆ ಇನ್ನು ನೀಡಬೇಕಾದ ಬಾಕಿ ಹಣವೆಷ್ಟು (ಕಾರ್ಖಾನೆ ಯವಾರು ಮಾಹಿತಿ ನೀಡುವುದು);

ಈ) ಬಾಕಿ ಇರುವ ಹಣ ಸಂದಾಯ ಮಾಡಲು ಸರ್ಕಾರ ಕೈಗೊಂಡ ಕಾನೂನಿನ ಕ್ರಮಗಳೇನು;

ಉ) ಸರ್ಕಾರ ಘೋಷಣೆ ಮಾಡಿದ ಪ್ರತಿ ಟನ್ನಿಗೆ ರೂ. 2500/– ದರವನ್ನು ಇದುವರೆಗೆ ಕಾರ್ಖಾನೆಗಳು ಸಂದಾಯ ಮಾಡದಿರಲು ಕಾರಣಗಳೇನು;

ಊ) ಹಾಗಿದ್ದಲ್ಲಿ, ಸರ್ಕಾರ ನಿಗದಿಪಡಿಸಿದ ದರ ನೀಡದೇ ಇರುವ ಕಾರ್ಖಾನೆಗಳ ಮೇಲೆ ಸರ್ಕಾರ ಕಾನೂನಿನ ಯಾವ ಕ್ರಮ ಕೈಗೊಂಡಿದೆ?

ಡಾ: ಹೆಚ್. ಎಸ್. ಮಹದೇವ ಪ್ರಸಾದ್ (ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು)

ಅ) ಬಿಜಾಪುರ ಜಿಲ್ಲೆಯಲ್ಲಿ ಒಟ್ಟು 6 ಸಕ್ಕರೆ ಕಾರ್ಖಾನೆಗಳು ಇರುತ್ತವೆ. ತಾಲ್ಲೂಕುವಾರು ವಿವರಗಳು ಈ ಕೆಳಗಿನಂತೆ ಇವೆ.

ಕ್ರ. ಸಂ.	ತಾಲ್ಲೂಕಿನ ಹೆಸರು	ಕಾರ್ಖಾನೆಗಳ ಸಂಖ್ಯೆ	ಕಾರ್ಖಾನೆಗಳ ವಿವರ ಮತ್ತು ವಿಳಾಸ
1	ಬಿಜಾಪುರ	1	ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಕೃಷ್ಣಾ ನಗರ, ಬಿಜಾಪುರ ತಾಲ್ಲೂಕು ಮತ್ತು ಜಿಲ್ಲೆ
2	ಇಂಡಿ	3	1. ಧ್ಯಾನಯೋಗಿ ಶ್ರೀ ಶಿವಕುಮಾರ ಸ್ವಾಮಿಜಿ ಶುಗರ್ಸ್ ಲಿ., ಹಿರೇಬೇವನೂರು, ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ. 2. ಇಂಡಿಯನ್ ಶುಗರ್

			ಮ್ಯಾನುಪ್ಯಾಕ್ಚರಿಂಗ್ ಕಂಪನಿ ಲಿ., ಹಾವಿನಾಳ, ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ 3. ಜಮಖಂಡಿ ಶುಗರ್ಸ್ ಲಿ., (ಯುನಿಟ್–2) ನಾದ್‌ಕೆ.ಡಿ. ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ
3	ಸಿಂಧಗಿ	2	1. ಕೆ. ಪಿ. ಆರ್. ಶುಗರ್ಸ್ ಮಿಲ್ಸ್, ಲಿ., ಅಲಮೇಲ, ಸಿಂದಗಿ ತಾಲ್ಲೂಕು ಬಿಜಾಪುರ ಜಿಲ್ಲೆ 2. ಮನಾಲಿ ಶುಗರ್ಸ್ ಲಿ., ಮಲಘಾಣ್ ಸಿಂಧಗಿ ತಾಲ್ಲೂಕು, ಬಿಜಾಪುರ ಜಿಲ್ಲೆ.

ಆ) 2013–14ನೇ ಸಾಲಿನಲ್ಲಿ ವಿಜಾಪುರ ಜಿಲ್ಲೆಯ ಈ ಕೆಳಕಾಣಿಸಿದ ಸಕ್ಕರೆ ಕಾರ್ಖಾನೆಗಳು ನುರಿಸಿರುವ ಕಬ್ಬಿನ ಪ್ರಮಾಣ ಸಕ್ಕರೆ ಉತ್ಪಾದನೆ ಮತ್ತು ಇಳುವರಿ ಪ್ರಮಾಣ ಈ ಕೆಳಗಿನಂತೆ ಇರುತ್ತದೆ.

ಕ್ರ. ಸಂ.	ಕಾರ್ಖಾನೆಯ ಹೆಸರು	ನುರಿಸಿರುವ ಕಬ್ಬಿನ ಪ್ರಮಾಣ	ಉತ್ಪಾದಿಸಿದ ಸಕ್ಕರೆ	ಇಳುವರಿ %
1	ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಕೃಷ್ಣಾ ನಗರ, ಬಿಜಾಪುರ	844650	97540	11.54

	ತಾಲ್ಲೂಕು ಮತ್ತು ಜಿಲ್ಲೆ			
2	ಧ್ಯಾನಯೋಗಿ ಶ್ರೀ ಶಿವಕುಮಾರ ಸ್ವಾಮಿಜಿ ಶುಗರ್ಸ್ ಲಿ., ಹಿರೆಬೇವನೂರು, ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ.	340133	34410	10.12
3	ಇಂಡಿಯನ್ ಶುಗರ್ ಮ್ಯಾನುಪ್ಯಾಕ್ಚರಿಂಗ್ ಕಂಪನಿ ಲಿ., ಹಾವಿನಾಳ, ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ	443250	48805	10.30
4	ಜಮಖಿಂಡಿ ಶುಗರ್ಸ್ ಲಿ., (ಯುನಿಟ್–2) ನಾದ್‌ಕೆ.ಡಿ. ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ	520891	55609	10.69
5	ಕೆ. ಪಿ. ಆರ್. ಶುಗರ್ಸ್ ಮಿಲ್ಸ್, ಲಿ., ಅಲಮೇಲ, ಸಿಂದಗಿ ತಾಲ್ಲೂಕು ಬಿಜಾಪುರ ಜಿಲ್ಲೆ	768316	79520	10.34
6	ಮನಾಲಿ ಶುಗರ್ಸ್ ಲಿ., ಮಲಘಾಣ್ ಸಿಂಧಗಿ ತಾಲ್ಲೂಕು, ಬಿಜಾಪುರ ಜಿಲ್ಲೆ.	282773	28273	10.00
	ಒಟ್ಟು	**3200013**	**344157**	**10.75**

2013–14ನೇ ಸಾಲಿಗೆ ಸಂಬಂಧಿಸಿದಂತೆ ಕಬ್ಬು ನಿಯಂತ್ರಣ ಮಂಡಳಿಯ ಉತ್ತರ ಕರ್ನಾಟಕ ಭಾಗಕ್ಕೆ ಎಕ್ಸ್‌ಫೀಲ್ಡ್ ದರದಲ್ಲಿ ಪ್ರತಿ ಮೆ. ಟನ್ ಕಬ್ಬಿಗೆ `2500/– ನ್ನು ನಿಗದಿಪಡಿಸಿದೆ. ಅದರಂತೆ ಬಿಜಾಪುರ ಜಿಲ್ಲೆಯ ಈ ಕೆಳಕಾಣಿಸಿದ ಸಕ್ಕರೆ ಕಾರ್ಖಾನೆಗಳು ರೈತರಿಗೆ ನೀಡಬೇಕಾಗಿರುವ ಮೊತ್ತ, ಪಾವತಿಸಿರುವ ಮೊತ್ತ ಹಾಗೂ ಬಾಕಿ ಇರುವ ಮೊತ್ತದ ವಿವರಗಳು ಈ ಕೆಳಗಿನಂತೆ ಇರುತ್ತವೆ.

(ಇ)

ಕ್ರ. ಸಂ.	ಕಾರ್ಖಾನೆಯ ಹೆಸರು	ನುರಿಸಿರುವ ಕಬ್ಬಿನ ಪ್ರಮಾಣ	ರೂ. 2500/– ರಂತೆ ಎಕ್ಸ್‌ಫೀಲ್ಡ್ ದರದಲ್ಲಿ ಪಾವತಿಸಬೇಕಾದ ಮೊತ್ತ	ಪಾವತಿಸಿರುವ ಮೊತ್ತ	ಬಾಕಿ ಇರುವ ಮೊತ್ತ
1	ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಕೃಷ್ಣಾ ನಗರ, ಬಿಜಾಪುರ ತಾಲ್ಲೂಕು ಮತ್ತು ಜಿಲ್ಲೆ	844650	21116	17315	3801
2	ಧ್ಯಾನಯೋಗಿ ಶ್ರೀ ಶಿವಕುಮಾರ ಸ್ವಾಮಿಜಿ ಶುಗರ್ಸ್ ಲಿ., ಹಿರೆಬೇವನೂರು, ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ.	340133	8503	4589	3914
3	ಇಂಡಿಯನ್ ಶುಗರ್ ಮ್ಯಾನುಪ್ಯಾಕ್ಚರಿಂಗ್ ಕಂಪನಿ ಲಿ., ಹಾವಿನಾಳ, ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ	443250	11081	7579	3502
4	ಜಮಖಂಡಿ ಶುಗರ್ಸ್ ಲಿ., (ಯುನಿಟ್–2) ನಾದ್‌ಕೆ.ಡಿ. ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ	520891	13022	9376	3646

5	ಕೆ. ಪಿ. ಆರ್. ಶುಗರ್ಸ್ ಮಿಲ್ಸ್, ಲಿ., ಅಲಮೇಲ, ಸಿಂದಗಿ ತಾಲ್ಲೂಕು ಬಿಜಾಪುರ ಜಿಲ್ಲೆ	768316	19208	13830	5378
6	ಮನಾಲಿ ಶುಗರ್ಸ್ ಲಿ., ಮಲಘಾಣ್ ಸಿಂಧಗಿ ತಾಲ್ಲೂಕು, ಬಿಜಾಪುರ ಜಿಲ್ಲೆ.	282773	7069	4416	2653
	ಒಟ್ಟು	**3200013**	**79999**	**57105**	**22894**

ಈ), (ಉ) ಮತ್ತು (ಊ) ಕಬ್ಬು ನಿಯಂತ್ರಣ ಮಂಡಳಿಯು 2013–14ನೇ ಸಲಿಗೆ ನಿಗದಿಪಡಿಸಿದ ಕಬ್ಬಿನ ದರ ರೂ.2500/– ರ ಆದೇಶವನ್ನು ಪ್ರಶ್ನಿಸಿ ದಕ್ಷಿಣ ಭಾರತ ಸಕ್ಕರೆ ಕಾರ್ಖಾನೆಗಳ ಒಕ್ಕೂಟ, ಎನ್.ಎಸ್.ಎಲ್. ಶುಗರ್ಸ್ ಲಿ., ಮತ್ತು ಕೋರಮಂಡಲ್ ಶುಗರ್ಸ್ ಹಾಗೂ ಇತರೆ ಕಾರ್ಖಾನೆಗಳು ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 64865–67/2013 ನ್ನು ದಾಖಲಿಸಿರುತ್ತಾರೆ. ಈ ಪ್ರಕರಣವು ನ್ಯಾಯಾಲಯದಲ್ಲಿ ವಿಚಾರಣೆಯ ಹಂತದಲ್ಲಿ ಇರುತ್ತದೆ. ಈ ಮಧ್ಯೆ ಕಬ್ಬಿನದ ದರ ಪಾವತಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳು ನೋಟಿಸ್ ನೀಡಿದ್ದು, ಕಾರ್ಖಾನೆಗಳು ಇದನ್ನು ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿರುತ್ತವೆ. ನ್ಯಾಯಾಲಯವು ಈ ಸಂಬಂಧ ದಿನಾಂಕ: 22.05.2014 ರಂದು ನೀಡಿರುವ ಮಧ್ಯಂತರ ಆದೇಶದಲ್ಲಿ, ಎಲ್ಲ ಕ್ರಮಗಳಿಗೆ ಜುಲೈ 2014ರ ಅಂತ್ಯದವರೆಗೆ ಮಧ್ಯಂತರ ತಡೆಯಾಜ್ಞೆ ಆದೇಶ ನೀಡಿರುತ್ತದೆ. ಈ ಮಧ್ಯಂತರ ಆದೇಶದ ಪ್ರಯೋಜನವು ಕೇಂದ್ರ ಸರ್ಕಾರವು ನಿಗದಿಪಡಿಸಿರುವ ನ್ಯಾಯಯುತ ಹಾಗೂ ಲಾಭದಾಯಕ ಬೆಲೆ ನೀಡದಿರುವ ಕಾರ್ಖಾನೆಗಳಿಗೆ ಅನ್ವಯಿಸುವುದಿಲ್ಲವೆಂದು, ಅಂತಹ ಪ್ರಕರಣಗಳಲ್ಲಿ ಸರ್ಕಾರವು ನೋಟೀಸ್ ನೀಡಿ ಕ್ರಮ ಕೈಗೊಳ್ಳಬಹುದೆಂದು ಆದೇಶಿಸಿದೆ.

ಕೇಂದ್ರ ಸರ್ಕಾರವು ನಿಗದಿಪಡಿಸಿರುವ ಎಫ್.ಆರ್.ಪಿ. ದರ ಪಾವತಿಸದೇ ಇರುವ ಸಕ್ಕರೆ ಕಾರ್ಖಾನೆಗಳಿಗೆ ಸಕ್ಕರೆ ನಿರ್ದೇಶನಾಲಯದಿಂದ ದಿನಾಂಕ: 31.05.2014ರಂದು ನೋಟೀಸ್ ನೀಡಿ, ಕಬ್ಬು ಸರಬರಾಜು ಮಾಡಿದ ರೈತರಿಗೆ ಪಾವತಿಸಬೇಕಾದ ಬಾಕಿ ಮೊತ್ತವನ್ನು ಹಾಗೂ 14 ದಿನಗಳ ನಂತರ ಪಾವತಿಸಲಾದ ಮೊತ್ತಕ್ಕೆ ವಿಳಂಬವಾದ ಅವಧಿಗೆ ಬಡ್ಡಿ ಸಮೇತ ನೀಡಿದ ಬಗ್ಗೆ 7 ದಿನಗಳಲ್ಲಿ ವರದಿ ನೀಡಲು ಹಾಗೂ ತಪ್ಪಿದಲ್ಲಿ, ಕಬ್ಬು (ನಿಯಂತ್ರಣ) ಆದೇಶ 1966ರ ಕಲಂ 3 (8) ರ ಪ್ರಕಾರ ಭೂ–ಕಂದಾಯ ಬಾಕಿ ಎಂದು ಪರಿಗಣಿಸಿ ಕಬ್ಬು ಬಿಲ್ ಬಾಕಿಯನ್ನು ಶೇ. 15ರ ಬಡ್ಡಿಯೊಂದಿಗೆ ವಸೂಲು ಮಾಡಿ ರೈತರಿಗೆ

ಪಾವತಿಸಲು ಪ್ರಮಾಣ ಪತ್ರ ಹೊರಡಿಸಲಾಗುವುದೆಂದು ತಿಳಿಸಲಾಗಿದೆ. ಕೇಂದ್ರ ಸರ್ಕಾರ ನಿಗದಿಪಡಿಸಿರುವ ಎಫ್.ಆರ್.ಸಿ. ದರವನ್ನು ಪಾವತಿ ಮಾಡದೇ ಇರುವ ಕಾರ್ಖಾನೆಗಳಿಗೆ ದಿನಾಂಕ: 21.06.2014 ರಂದು ಕಬ್ಬು ಬಿಲ್ಲು ಬಾಕಿಯನ್ನು ಭೂಕಂದಾಯ ಬಾಕಿ ಎಂದು ವಸೂಲು ಮಾಡಲು ವಸೂಲಾತಿ ಪ್ರಮಾಣ ಪತ್ರವನ್ನು ನೀಡಲಾಗಿದೆ.

ಕ್ರ ಸಂ.	ಕಾರ್ಖಾನೆಯ ಹೆಸರು
1	ಧ್ಯಾನಯೋಗಿ ಶ್ರೀ ಶಿವಕುಮಾರ ಸ್ವಾಮಿಜಿ ಶುಗರ್ಸ್ ಲಿ., ಹಿರೆಬೇವ ನೂರು, ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ.
2	ಇಂಡಿಯನ್ ಶುಗರ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ ಲಿ., ಹಾವಿನಾಳ, ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ
3	ಜಮಖಂಡಿ ಶುಗರ್ಸ್ ಲಿ., (ಯುನಿಟ್–2) ನಾದ್‌ಕೆ.ಡಿ. ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ
4	ಮನಾಲಿ ಶುಗರ್ಸ್ ಲಿ., ಮಲಘಾಣ್ ಸಿಂಧಗಿ ತಾಲ್ಲೂಕು, ಬಿಜಾಪುರ ಜಿಲ್ಲೆ.

ಈ 4 ಕಾರ್ಖಾನೆಗಳ ಪೈಕಿ ದಿನಾಂಕ: 09.07.2014ರ ವರೆಗೆ ವರದಿ ತರಿಸಿದ್ದು, ಅದರ ಪ್ರಕಾರ 3 ಕಾರ್ಖಾನೆಗಳು ಏಫ್‌ಆರ್‌ಸಿ ದರವನ್ನು ರೈತರಿಗೆ ಪಾವತಿಸಿರುತ್ತವೆ. ಮನಾಲಿ ಶುಗರ್ಸ್ ಲಿ., ಮಲಘಾಣ್ ಸಿಂದಗಿ ತಾಲ್ಲೂಕು, ಬಿಜಾಪುರ ಜಿಲ್ಲೆ ಇದು ಮಾತ್ರ ಪಾವತಿಸಲು ಬಾಕಿ ಇದ್ದು, ಜಿಲ್ಲಾಧಿಕಾರಿಗಳು ವಸೂಲಾತಿ ಪ್ರಮಾಣ ಪತ್ರದ ಆಧಾರದ ಮೇಲೆ ಬಾಕಿ ವಸೂಲಾತಿ ಮಾಡಿ ರೈತರಿಗೆ ಪಾವತಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

ಈ ವಿಷಯದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ನೀಡುವ ಆದೇಶದ ನಂತರ ಮುಂದೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.